ಓ.ಎಸ್. ನಂ. 51/2014
ಡಿ.ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕಃ 14.03.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಶ್ರೀ ಟಿ.ಕೆ.ಎಂ. ವಕೀಲರಿಂದ</u>**

**1.** ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂ. 73/3 ಅದು ಒಟ್ಟು 28 ಗುಂಟೆ ವಿಸ್ತೀರ್ಣ ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ. 73/2 ಸ್ವತ್ತು ಬರುತ್ತದೆ. ಅದು ನಂಜುಂಡಪ್ಪನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಸರ್ವೆ ನಂ. 73/2 ರ ಸ್ವತ್ತನ್ನು ಪುಟ್ಟಗಂಗಮ್ಮನವರಿಂದ 1967 ರ ಸಾಲಿನಲ್ಲಿ ನಮ್ಮ ದೊಡ್ಡಪ್ಪ ಹಾಗೂ ಹನುಮಂತರಾಯಪ್ಪ ಜಂಟಿಯಾಗಿ ಖರೀದಿ ಮಾಡಿರುತ್ತಾರೆ. ಸರ್ವೆ ನಂ. 73/2 ಒಟ್ಟು 1 ಎಕರೆ 30 ಗುಂಟೆ ವಿಸ್ತೀರ್ಣ ಇರುತ್ತದೆ. ಸದರಿ 1 ಎಕರೆ 30 ಗುಂಟೆ ಜಮೀನು ಮೂಲತಃ ಯಾರಿಗೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಗಂಗಮ್ಮನವರಿಗೆ ವೀರಗಂಗಮ್ಮನವರಿಂದ ದಾನವಾಗಿ ಬಂದಿರುತ್ತದೆ. ಸರ್ವೆ ನಂ. 73/2 ನಂಜುಂಡಪ್ಪನವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 73/2 ರ ಜಮೀನಿನ ಪಹಣಿ ನಂಜುಂಡಪ್ಪನವರ ಹೆಸರಿನಲ್ಲಿ ಬರುತ್ತಿದೆ ಆದರೆ ಅದು ತಪ್ಪಾಗಿ ಬರುತ್ತಿದೆ ಎಂದು ನುಡಿದಿದ್ದಾರೆ.

**2.** ನನಗೆ ಸೇರಿದ ಮನೆ ಸರ್ವೆ ನಂ. 73/2 ರ ಸ್ವತ್ತಿನಲ್ಲಿ ಇರುತ್ತದೆ. ಸರ್ವೆ ನಂ. 73/3 ಕ್ಕೂ ಸರ್ವೆ ನಂ. 73/2 ಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯ ಬಾಗಿಲೂ ಸಹ ಸರ್ವೆ ನಂ. 73/2 ರಲ್ಲಿಯೇ ಬರುತ್ತದೆ. ನಮ್ಮ ಮನೆಯ ಬಾಗಿಲು ದಕ್ಷಿಣಕ್ಕೆ ಮುಖ ಮಾಡಿ ಇರುತ್ತದೆ. ಸರ್ವೆ ನಂ. 73/3 ರ ಪೂರ್ವಕ್ಕೆ 10-12 ಅಡಿ ಜಾಗವನ್ನು ಕುರಿರೊಪ್ಪ (ಶೆಡ್) ಮಾಡಲು ಪ್ರಯತ್ನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ನಂಜುಂಡಪ್ಪನಾಗಲೀ ಅಥವಾ ಅವರ ಮಕ್ಕಳಾಗಲೀ ಸರ್ವೆ ನಂ. 73/2 ರ ಜಮೀನನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ. 73/2 ರಲ್ಲಿ ನಮ್ಮ ಮನೆ ಕಟ್ಟಿರುವ ಪಶ್ಚಿಮ ಮತ್ತು ದಕ್ಷಿಣಕ್ಕೆ ಬೇರೆ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂ. 73/2 ಎ ರಲ್ಲಿ ಅಕ್ರಮವಾಗಿ ಪೂರ್ವ-ಪಶ್ಚಿಮ 15 ಅಡಿ ಉತ್ತರ-ದಕ್ಷಿಣ-10 ಅಡಿ ಒತ್ತುವರಿ ಮಾಡಿ ಮನೆಯನ್ನು ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಕುರಿರೊಪ್ಪ (ಶೆಡ್) ಮಾಡಲು ಪ್ರಯತ್ನ ಮಾಡಿರುವ ಜಾಗ ಸರ್ವೆ ನಂ. 73/3 ರ ಜಾಗ ಎಂದರೆ ಸರಿಯಲ್ಲ.

ಓ.ಎಸ್. ನಂ. 51/2014
ಡಿ.ಡಬ್ಲ್ಯೂ -1

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**